ಬೆಂಗಳೂರು, ದಕ್ಷಿಣ ಕನ್ನಡ, ಗುಲ್ಬರ್ಗಾ, ಚಿಕ್ಕಮಗಳೂರು, ಧಾರವಾಡ, ಉತ್ತರ ಕನ್ನಡ, ರಾಯಚೂರು, ಶಿವಮೊಗ್ಗ, ಬೀದರ್, ಮಂಡ್ಯ, ಮೈಸೂರು, ಚಿತ್ರದುರ್ಗ ಗಳಲ್ಲಿ ಪತ್ತೆಯಾಗಿವೆ.

ಆ) ರಾಜ್ಯದಲ್ಲಿ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಒಟ್ಟು 26 ಲೈಂಗಿಕ ರೋಗಗಳ ಚಿಕಿತ್ಸಾಲಯಗಳಿದ್ದು ಇವುಗಳ ಸೇವೆಗಳನ್ನು ಉತ್ತಮಪಡಿಸಲಾಗುತ್ತಿದೆ. ಹಾಗೂ ಲೈಂಗಿಕ ಚಿಕಿತ್ಸಾಲಗಳಿಗೆ ಬರುವ ರೋಗಿಗಳಿಗೆ ಸಮೂಹ ಮಾಧ್ಯಮ ಶಿಕ್ಷಣ ಮತ್ತು ಸುರಕ್ಷಿತ ಲೈಂಗಿಕ ವಿಧಾನವನ್ನು ಅನುಸರಿಸಲು ತಿಳಿವಳಿಕೆ ನೀಡಲಾಗುತ್ತಿದೆ. ತುರ್ತು ಪರಿಸ್ಥಿತಿಯಲ್ಲಿ ರಕ್ತವನ್ನು ಪಡೆಯವಲ್ಲಿ ರಕ್ತವನ್ನು ಹೆ.ಐ.ವಿ: ಏಡ್ಸ ಸೋಂಕು ಮುಕ್ತವೆಂದು ದೃಢೀಕರಿಸಿದ ನಂತರ ನೀಡುವಂತೆ ಎಲ್ಲಾ ರಕ್ತನಿಧಿ ಬ್ಯಾಂಕುಗಳಿಗೆ ಹಾಗೂ ಎಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಸೂಚನೆ ನೀಡಲಾಗಿದೆ.

ಆಸ್ಪತ್ರೆಗಳಲ್ಲಿ ಸರಿಯಾದ ರೀತಿಯಲ್ಲಿ ಸಂಸ್ಕರಿಸಿದ ಸೂಜಿ ಮತ್ತು ಸಿರಿಂಜುಗಳನ್ನು, ಇತರೆ ಉಪಕರಣಗಳನ್ನು ಉಪಯೋಗಿಸಲು ತಿಳಿಸಲಾಗಿದೆ. ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಲೈಂಗಿಕ ರೋಗ ಚಿಕಿತ್ಸಾ ವಿಭಾಗಕ್ಕೆ ಅಗತ್ಯ ಔಷಧ ಪೂರೈಕೆಗೆ ಕ್ರಮಕೈಗೊಳ್ಳಲಾಗಿದೆ.

ಸಾಮಾನ್ಯ ಜನರಲ್ಲಿ ಏಡ್ಸ ಬಗ್ಗೆ ಅರಿವು ಮೂಡಿಸಲು ಆಕಾಶವಾಣಿ, ದೂರದರ್ಶನ, ವೃತ್ತಪತ್ರಿಕೆಗಳಲ್ಲಿ ಏಡ್ಸ ರೋಗದ ಬಗ್ಗೆ ಜಾಹೀರಾತು ನೀಡಲಾಗುತ್ತಿದೆ.

ಜನಸಾಮಾನ್ಯರಿಗೆ ಏಡ್ಸ ರೋಗದ ಬಗ್ಗೆ ಅರಿವು ಮೂಡಿಸಲು ಅನುಕೂಲವಾಗುವಂತೆ ಕನ್ನಡ ಭಾಷೆಯಲ್ಲಿ ಭಿತ್ತಿ ಪತ್ರಗಳನ್ನು ಹಾಗೂ ಕರಪತ್ರಗಳನ್ನು ಮುದ್ರಿಸಿ ಹಂಚುವ ಕ್ರಮವನ್ನು ಕೈಗೊಳ್ಳಲಾಗಿದೆ. ಈ ದಿಶೆಯಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ಪ್ರಕರಣಗಳು ಯಾವುದೇ ಅನಾರೋಗ್ಯ ಪರಿಸ್ಥಿತಿಗಳಲ್ಲಿ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಬಂದಲ್ಲಿ ಅವರಿಗೂ ಸಹ ಎಲ್ಲರಂತೆಯೇ ಚಿಕಿತ್ಸೆ ನೀಡಲು ಕ್ರಮಕೈಗೊಂಡು ಎಲ್ಲಾ ಆಸ್ಪತ್ರೆಗಳ ಮುಖ್ಯಸ್ಥರಿಗೆ ಮಾರ್ಗದರ್ಶನ ನೀಡಲಾಗಿದೆ. ಈ ಬಗ್ಗೆ ಪ್ರತಿ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿಯ ವೈದ್ಯರುಗಳಿಗೆ ತಲಾ ಇಬ್ಬರಿಗೆ ರೋಗ ಚಿಕಿತ್ಸೆ ಬಗ್ಗೆ ತರಬೇತಿ ನೀಡಲಾಗಿದೆ.

ಇ) ಲೈಂಗಿಕ ರೋಗಗಳು (ವಿ.ಡಿ) ನಿಯಂತ್ರಣದಲ್ಲಿದೆ. ಆದರೆ ಏಡ್ಸ ರೋಗಕ್ಕೆ ಲಸಿಕೆ ಅಥವಾ ಚಿಕಿತ್ಸೆ ಲಭ್ಯವಿಲ್ಲದ ಕಾರಣ ಹರಡುತ್ತಿದೆ. ರೋಗ ಹರಡದಂತೆ ಮುಂಜಾಗರುಕತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಖಾಲಿ ಇರುವ ಚಿತ್ರಕಲಾ ಶಿಕ್ಷಕರ ಹುದ್ದೆಗಳು

163 - ಶ್ರೀ ಶಿವಾನಂದ ಎಸ್ ಪಾಟೀಲ್ (ಟಿಕೋಟಾ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಚಿತ್ರಕಲಾ ಶಿಕ್ಷಕರ ಒಟ್ಟು ಸಂಖ್ಯೆ ಎಷ್ಟು; ಹಾಗೂ ಎಂದಿನಿಂದ ಈ ಹುದ್ದೆಗಳು ಖಾಲಿ ಇರುತ್ತವೆ;

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಾಲೆಗಳಲ್ಲಿ - 23.

ಪ್ರೌಢಶಾಲೆಗಳಲ್ಲಿ - 185.

ಪ್ರಾಥಮಿಕ ಶಾಲೆಗಳು

1982-83	01
1985-86	01
1987-88	01
1993-94	09
1994-95	11
	23

ಪ್ರೌಢಶಾಲೆಗಳು

1988-89ರಿಂದ ಹೊಸ ಪ್ರೌಢ ಶಾಲೆಗಳು ಪ್ರಾರಂಭವಾದಾಗಿನಿಂದಲೂ 185 ಚಿತ್ರಕಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಆ) ಸರ್ಕಾರಿ ಆದೇಶ ಸಂಖ್ಯೆ ಇಡಿ 224 ಪಿಎಂಎಸ್ 95 ದಿನಾಂಕ 14.8.95ರ ಪ್ರಕಾರ ರಾಜ್ಯದಲ್ಲಿ ಹಾಲ ಪ್ರಾಥಮಿಕ ಶಾಲಾ ಶಿಕ್ಷಣ ಹಂತದಲ್ಲಿ ವೃತ್ತಿ ಶಿಕ್ಷಕರಿಗೆ ಹೆಚ್ಚು ಕೆಲಸ ಇಲ್ಲದಿರುವುದರಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಬಿಟ್ಟು ಉಳಿದ ಹುದ್ದೆಗಳನ್ನು ಸಂಗೀತ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸಲು ಆದೇಶ ನೀಡಿರುವುದರಿಂದ ಈ ಹುದ್ದೆಯನ್ನು ಇನ್ನು ಮುಂದೆ ಸಂಗೀತ ಶಿಕ್ಷಕರಾಗಿ ಪರಿವರ್ತಿಸಲಾಗಿದೆ.

ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಗ್ರಾಮಾಂತರ ಪ್ರದೇಶದಲ್ಲಿ ಸ್ವಂತ ಜಾಗದಲ್ಲಿ ಬೆಳೆಸಿರುವ ಮರಗಳನ್ನು ಬಳಕೆಗಾಗಿ ಕಡಿಯುಲು ಅರಣ್ಯ ಇಲಾಖೆಯ ಅನುಮತಿ

849 - ಶ್ರೀ ಆಗರ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಂತ ಜಮೀನಿನಲ್ಲಿ ಬೆಳೆಸಿರುವ ಮರಗಳನು ಸಂಪ